ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 683/2025

ಸಿ ಡಬ್ಲ್ಯೂ– 2

ಪಿ ಡಬ್ಲ್ಯೂ– 2

ದಿಃ 14–11–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ವಿನೋದ ಪ್ರಭು

ತಂದೆಯ ಹೆಸರುಃ ಸುಬ್ರಾಯ ಪ್ರಭು

ವಯಸ್ಸುಃ 47 ವರ್ಷ

ಉದ್ಯೋಗಃ ವ್ಯಾಪಾರ

ವಿಳಾಸಃ ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ–3 ರವರ ಪರಿಚಯ ಇರುತ್ತದೆ. ಅಂದಾಜು 1 ವರ್ಷದ ಹಿಂದೆ ನಾನು ನನ್ನ ಕೆಲಸ ಮೇರೆಗೆ ಅಂಕೋಲಾ ಪೊಲೀಸ್ ಠಾಣೆಗೆ ಹೋದಾಗ ಒಂದು ಸಹಿಯನ್ನು ಹಾಕಿರುತ್ತೇನೆ. ಯಾವ ಕಾರಣಕ್ಕಾಗಿ ಹಾಕಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿಲಾಗಿ, ಸದರಿ ದಾಖಲಾತಿ ಅಪಘಾತ ಸ್ಥಳದ ಪಂಚನಾಮೆಯಾಗಿದ್ದು, ಸಾಕ್ಷಿಯು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–11 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–11ಎ ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ಎಲ್ಲಿಯೂ ಕರೆದುಕೊಂಡು ಹೋಗಿರುವುದಿಲ್ಲ. ಎಷ್ಟು ಸಹಿ ಹಾಕಿರುತ್ತೇನೆ ಎಂದು ನೆನಪಿರುವುದಿಲ್ಲ.

ಸಾಕ್ಷಿಯು ಕಚ್ಚಾ ನಕಾಶೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಕಚ್ಚಾ ನಕಾಶೆಯನ್ನು ನಿಪಿ-12, ಸಾಕ್ಷಿಯ ಸಹಿಯನ್ನು ನಿಪಿ-12ಎ ಎಂದು ಗುರುತಿಸಲಾಯಿತು. ಮತ್ತೆ ಏನ್ನೂ ಮಾಡಿರುವುದಿಲ್ಲ. ಸಾಕ್ಷಿಯು ವಾಹನ ಪಂಚನಾಮೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ವಾಹನ ಪಂಚನಾಮೆಯನ್ನು ನಿಪಿ-13, ಸಾಕ್ಷಿಯ ಸಹಿಯನ್ನು ನಿಪಿ-13ಎ ಎಂದು ಗುರುತಿಸಲಾಯಿತು. ಎಲ್ಲ ಸಹಿಗಳನ್ನು ಠಾಣೆಯಲ್ಲೇ ಪಡೆದುಕೊಂಡಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮತ್ತೆ ನಾನು ಏನೂ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ದಿಃ 13-01-2025 ರಂದು ಅಂಕೋಲಾ ತಾಲೂಕಿನ ಜಮಗೋಡ ರೈಲ್ವೆಸ್ಟೇಷನ್ ಕ್ರಾಸ್ ಹತ್ತಿರ ಅಪಘಾತದ ವಿಷಯವಾಗಿ ಪಂಚನಾಮೆಗೆ ಹೋಗಿರುತ್ತೀರಿ ಎಂದರೆ ಸರಿಯಲ್ಲ. ಪಂಚನಾಮೆಯ ಜೊತೆಗೆ ಸ್ಥಳದಲ್ಲೇ ಕಚ್ಚಾ ನಕಾಶೆ ತಯಾರಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು 2 ಪೋಟೊಗಳನ್ನು ನೋಡಿ ಗುರುತಿಸಿದ್ದು, ಪೊಟೋಗಳನ್ನು ಪುರಾವೆಗೆ ಒಳಪಟ್ಟು ನಿಪಿ-14 ಮತ್ತು 15 ಎಂದು ಗುರುತಿಸಲಾಯಿತು. ಅದೇ ದಿನ ಪಂಚನಾಮೆಯನ್ನು ಬೆಳಿಗ್ಗೆ 7.15 ರಿಂದ 8.15 ಗಂಟೆಯವರೆಗೆ ಜರುಗಿಸಲಾಯಿತು ಎಂದರೆ ಸರಿಯಲ್ಲ. ಅದೇ ದಿನ ವಾಹನ ಪಂಚನಾಮೆಗೆ ಪೊಲೀಸ್ ವಸತಿ ಗೃಹದ

ಆವರಣದಲ್ಲಿ ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ಹೋಗಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಅದಕ್ಕೆ ಸಂಬಂಧಪಟ್ಟ 2 ಪೋಟೋಗಳನ್ನು ನೋಡಿ ಗುರುತಿಸಿದ್ದು, ಪೋಟೋಗಳನ್ನು ನಿಪಿ-16 ಮತ್ತು 17 ಎಂದು ಗುರುತಿಸಲಾಯಿತು. ವಾಹನಗಳ ಪೋಟೋಗಳನ್ನು ಸಾಕ್ಷಿಯು ಗುರುತಿಸುವಲ್ಲಿ ವಿಫಲರಾಗಿರುತ್ತಾರೆ. ನಿಮಗೆ ಈ ಪ್ರಕರಣದ ಸಂಪೂರ್ಣ ಮಾಹಿತಿ ಇದ್ದು, ಘಟನಾ ಸ್ಥಳ ಪಂಚನಾಮೆ ಹಾಗೂ ವಾಹನ ಪಂಚನಾಮೆಗೆ ಹೋಗಿ, ಪಂಚನಾಮೆಗಳ ಮೇಲೆ, ಕಚ್ಚಾ ನಕಾಶೆಯ ಮೇಲೆ ಇರುವ ಸಹಿಗಳನ್ನು ಹಾಕಿದ್ದರೂ ಸಹ, ಅದಕ್ಕೆ ಸಂಬಧಪಟ್ಟಂತೆ ಸ್ಥಳದಲ್ಲೇ ಪೋಟೋಗಳನ್ನು ಪಡೆದಿದ್ದರೂ ಸಹ, ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

3. ಪೋಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದುಕೊಂಡಿರುತ್ತಾರೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸರಿ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.